

ಅನಿಸುವುದು, ಅವರೊಂದು ಅಗ್ನಿಕುಂಡವಿದ್ದಂತೆ. ನೀವು ತುಸು ದೂರದಲ್ಲಿ ಕುಳಿತು ಅದರ ಬಿಸುಪನ್ನು ಅನುಭವಿಸಬಹುದು. ಹತ್ತಿರ ಹೋದಷ್ಟೂ ಝಳ ಜಾಸ್ತಿ. ತಮ್ಮ ಓರಗೆಯವರಲ್ಲಿ ಅಪಾರವಾದ ಹೊಟ್ಟೆಕಿಚ್ಚನ್ನು ಸೃಷ್ಟಿಸಿದ್ದ ಲಂಕೇಶ್, ನಮ್ಮಂತಹ ಎಳೆಯರಲ್ಲಿ ಆಕರ್ಷಣೆಯನ್ನು ಹುಟ್ಟಿಸುತ್ತಿದ್ದರು. ಸ್ಥಾಪಿತ ನೋಟಕ್ರಮಗಳಿಗೆ ವಿರುದ್ಧವಾದುದನ್ನು ಯೋಚಿಸುವ ಅವರ ಭಿನ್ನ ಬಗೆಯೇ ನಮ್ಮಲ್ಲಿ ಕುತೂಹಲ ಹುಟ್ಟಿಸ್ತಾ ಇತ್ತು. ತಮ್ಮ ಪತ್ರಿಕೆಯ ಮೂಲಕ ನಿಜವಾದ ಅರ್ಥದಲ್ಲಿ ಹೊಸ ಅಲೆಯನ್ನ ಸಮಾಜದ ಎಲ್ಲ ವರ್ಗದವರಲ್ಲೂ ಮೂಡಿಸಿದ ಅಪರೂಪದ ವ್ಯಕ್ತಿ ಲಂಕೇಶ್.

ಪೆರಿಯಾರ್ ಬೆಂಗಳೂರಿಗೆ ಬಂದಿದ್ದಾಗ ಟೌನ್ ಹಾಲ್‌ನಲ್ಲಿ ಸ್ವಾಗತ ಭಾಷಣ ಮಾಡಿದವರು ಲಂಕೇಶ್. ಅದಕ್ಕೆ ಮೊದಲು ಕೆಲವರು ಪೆರಿಯಾರ್ ವೇದಿಕೆಗೆ ಬಂದಾಗ ಚಪ್ಪಲಿಗಳನ್ನು, ಕಲ್ಲುಗಳನ್ನು ತೂರಿದರು. ಲಂಕೇಶ್ ಸ್ವಾಗತ ಭಾಷಣವನ್ನು, 'ಪೆರಿಯಾರ್ ತಮ್ಮ ಜೀವನಪರ್ಯಂತ ಭಾಗವಹಿಸಿದ ಎಲ್ಲ ಸಭೆಗಳಲ್ಲಿ ಇಂಥ ಅವಮಾನಗಳನ್ನೇ ಎದುರಿಸಿರುವಂಥವರು. ನೀವು ಕೆಲವರು ಪ್ರತಿಭಟಿಸದೇ ಇದ್ದಿದ್ದರೆ ಅವರಿಗೆ ತುಂಬ ಅವಮಾನವಾಗುತ್ತಿತ್ತು' ಎಂದು ಪ್ರಾರಂಭಿಸಿದರು! ಆ ಸಂದರ್ಭದಲ್ಲೇ ನನಗೂ ಕವಿ ಸಿದ್ದಲಿಂಗಯ್ಯ ಅವರಿಗೂ ಸನಾತನಿಗಳು ಗೂಸಾಗಳನ್ನು ಕೊಟ್ಟಿದ್ದರು!

**◆ ನಿಮ್ಮಲ್ಲಿ ನಾಸ್ತಿಕತೆ ಕಾಲೇಜು ದಿನಗಳಲ್ಲಿ ಶುರುವಾದದ್ದಾ, ಮುಂಚೆಯಿಂದಲೂ ಇತ್ತಾ?**

ನನ್ನ ಅಮ್ಮ ದೇವರ ಗೂಡಲ್ಲಿ ದೀಪ ಹಚ್ಚೋಕು, ನಾನು ಆಮೇಲೆ ಹೋಗಿ ಆರಿಸೋಕು ಸರಿಯಾಗ್ತಿತ್ತು! ಅಮ್ಮ ಆ ದಿನಗಳಲ್ಲಿ ಯಾವತ್ತೂ ಬೈಯುತ್ತಿರಲಿಲ್ಲ. ಗೊತ್ತಿದ್ದರೂ ಎಲ್ಲಿಂದಲೋ ಗಾಳಿ ಜೋರಾಗಿ ಬೀಸ್ತಿದೆ ಅನ್ನೋರು. ಆ ದಿನಗಳಿಂದಲೇ ದೇವರು ನನಗೆ ನಾಸ್ತಿಕ ವರದಾನವನ್ನು ನೀಡಿದ್ದಿರಬಹುದು!

**◆ ನಿಮ್ಮ ಮೊದಲ ಕೃತಿ 'ಬೆಳ್ದಿಂಗ್ಳಪ್ಪನ ಪೂಜೆ'. ಸಂಶೋಧನಾ ಕೃತಿಯಾದ ಇದು ನಿಮ್ಮ ಅಕಡೆಮಿಕ್ ವ್ಯಕ್ತಿತ್ವದ ಒಳ್ಳೆಯ ಆರಂಭವೇ ಆಗಿತ್ತು. ಯಾಕೆ ಇದು ಮುಂದುವರಿಯಲಿಲ್ಲ?**

ಜಾನಪದ ನನ್ನ ವಿಶೇಷ ವಿಷಯವಾಗಿತ್ತು. ಎಂಎ ಓದುವಾಗಲೇ ಇದು ಪ್ರಕಟವಾಯ್ತು.